ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 93
ಸದಸ್ಯರ ಹೆಸರು : ಶ್ರೀ ಎನ್.ಎಸ್.ಬೋಸ್‌ರಾಜು (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 09.07.2018
ಉತ್ತರಿಸಬೇಕಾದ ಸಚಿವರು : ಮಾನ್ಯ ಜಲಸಂಪನ್ಮೂಲ ಸಚಿವರು (ಭಾರಿ ಮತ್ತು ಮಧ್ಯಮ ನೀರಾವರಿ)

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
ಅ)	ತುಂಗಭದ್ರ ಪ್ರಾಜೆಕ್ಟ್‌ನಲ್ಲಿ 32 ಟಿ.ಎಂ.ಸಿ. ಹೂಳು ತುಂಬಿರುವುದರಿಂದ ನೀರಿನ ಸಂಗ್ರಹಣೆ ಕಡಿಮೆಯಾಗಿರುವುದನ್ನು ಸರಿದೂಗಿಸಲು ಸರ್ಕಾರ ತೆಗೆದುಕೊಂಡ ಕ್ರಮವೇನು;	ತುಂಗಭದ್ರಾ ಜಲಾಶಯದಲ್ಲಿ ಹೂಳಿನಿಂದ ಉಂಟಾದ ಸಂಗ್ರಹಣಾ ಸಾಮರ್ಥ್ಯದ ನಷ್ಟವನ್ನು ಭರಿಸಲು ಪ್ರವಾಹ ಕಾಲುವೆ ಮೂಲಕ ನವಿಲೆ ಹತ್ತಿರ ಸಮತೋಲನ ಜಲಾಶಯವನ್ನು ನಿರ್ಮಿಸುವ ಕುರಿತಂತೆ ವಿವಿಧ ಮಾರ್ಗೋಪಾಯಗಳನ್ನು ಕರ್ನಾಟಕ ನೀರಾವರಿ ನಿಗಮದ ಪರಿಶೀಲನೆಯಲ್ಲಿದೆ.
ಆ)	ನಾರಾಯಣಪುರ ಬಲದಂಡೆ ಕಾಲುವೆ (NRBC) ಪೂರ್ಣ ಪ್ರಮಾಣದ ಕಾಲುವೆ ನಿರ್ಮಾಣ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮವೇನು;	ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–2ರಡಿ ನಾರಾಯಣಪುರ ಬಲದಂಡೆ ಕಾಲುವೆ ಕಿ.ಮೀ 0.00 ದಿಂದ 95.00 ಹಾಗೂ ವಿತರಣಾ ಕಾಲುವೆ ಸಂಖ್ಯೆ: 1 ರಿಂದ 18ರ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿದ್ದು 2006–07ನೇ ಸಾಲಿನಿಂದ ಸದರಿ ಕಾಲುವೆ ಜಾಲದಡಿ ರಾಯಚೂರು ಜಿಲ್ಲೆಯ ಲಿಂಗಸಗೂರು ಹಾಗೂ ದೇವದುರ್ಗ ತಾಲ್ಲೂಕುಗಳಡಿಯ ಒಟ್ಟಾರೆ 97,203 ಹೆಕ್ಟೇರ್ ಅಚ್ಚುಕಟ್ಟು ಕ್ಷೇತ್ರವನ್ನು ಅಧಿಸೂಚನೆಗೊಳಿಸಿ ನೀರಾವರಿ ಸೌಲಭ್ಯ ಕಲ್ಪಿಸಲಾಗಿರುತ್ತದೆ. ನಾರಾಯಣಪುರ ಬಲದಂಡೆ ಕಾಲುವೆ ವಿಸ್ತರಣೆಯ ಕಿ.ಮೀ.95.00 ರಿಂದ 168.50 ರವರೆಗಿನ ಕಾಮಗಾರಿಯು ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–3 ರಡಿ ಒಂದು ಉಪ ಯೋಜನೆಯಾಗಿದ್ದು, ಸದರಿ ಯೋಜನೆಯಡಿ ರಾಯಚೂರು ಜಿಲ್ಲೆಯ ದೇವದುರ್ಗ ಹಾಗೂ ರಾಯಚೂರು ತಾಲ್ಲೂಕುಗಳಡಿ 56,100 ಹೆಕ್ಟೇರ್ ಅಚ್ಚುಕಟ್ಟು ಕ್ಷೇತ್ರಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವುದಾಗಿರುತ್ತದೆ. ಪ್ರಸ್ತುತ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–3ರಡಿಯ ನಾರಾಯಣಪುರ ಬಲದಂಡೆ ಕಾಲುವೆ (ನಾ.ಬ.ದಂ.ಕಾ) ವಿಸ್ತರಣೆಯ ಉಪಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದು ಈಗಾಗಲೇ, ನಾರಾಯಣಪುರ ಬಲದಂಡೆ ಕಾಲುವೆ ಕಿ.ಮೀ.95.00 ರಿಂದ 130.00 ವರೆಗಿನ ಮುಖ್ಯ ಕಾಲುವೆ ವಿಸ್ತರಣೆ ಕಾಮಗಾರಿ ಪೂರ್ಣಗೊಂಡಿರುತ್ತದೆ. ಮುಂದುವರೆದು, ನಾ.ಬ.ದಂ.ಕಾ ಮುಖ್ಯ ಕಾಲುವೆ ಕಿ.ಮೀ.130.00 ರಿಂದ 168.50 (ಕಿ.ಮೀ.150.70 ರಿಂದ 153.14 ವರೆಗೆ ಬೃಹತ್ ಅಕ್ವೆಡೆಕ್ಟ್ ನಿರ್ಮಾಣ ಒಳಗೊಂಡು) ನಿರ್ಮಾಣದ 5 ಪ್ಯಾಕೇಜುಗಳಡಿ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು ಪ್ರಗತಿಯ ವಿವಿಧ ಹಂತದಲ್ಲಿರುತ್ತವೆ.
ಇ)	ನಾರಾಯಣಪುರ ಬಲದಂಡೆ ಕಾಲುವೆಯ ಉಪಕಾಲುವೆ ನಿರ್ಮಾಣ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮವೇನು?	ಕೃಷ್ಣಾ ನ್ಯಾಯಾಧಿಕರಣ–2ರ ಅಂತಿಮ ತೀರ್ಪು ಅಧಿಸೂಚನೆಗೊಳ್ಳಬೇಕಿದೆ. ಪ್ರಸ್ತುತ ಮುಖ್ಯ ಕಾಲುವೆ / ಶಾಖಾ ಕಾಲುವೆಗಳಲ್ಲಿ ನೀರು ಹರಿಸಿದಾಗ ಅವಶ್ಯಕ ಕಾಲುವೆ ಜಾಲದ ನಿರ್ಮಾಣ (ವಿತರಣಾ ಕಾಲುವೆ, ಲ್ಯಾಟರಲ್, ಸಬ್–ಲ್ಯಾಟರಲ್ ಹಾಗೂ ಫೀಡರ್ ಕಾಲುವೆ) (Gravity Flow) ಮುಖಾಂತರ ಯೋಜನೆಯಡಿಯ ಅಚ್ಚುಕಟ್ಟು ಪ್ರದೇಶದಲ್ಲಿಯ ಕೆರೆಗಳನ್ನು ತುಂಬಿಸಲು ಅನುಕೂಲವಾಗಿಸುವ ಹಾಗೂ ಬೃಹತ್

32

		ಅಕ್ವಡೆಕ್ಟ ನಿರ್ಮಾಣ ಒಳಗೊಂಡಿರುವಂತಹ ವಿತರಣಾ ಕಾಲುವೆ ಜಾಲದ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿರುತ್ತದೆ. ಈಗಾಗಲೇ ನಾರಾಯಣಪುರ ಬಲದಂಡೆ ಕಾಲುವೆ ವಿಸ್ತರಣೆಯಡಿ ವಿತರಣಾ ಕಾಲುವೆ ಜಾಲದಿಂದ ಫೀಡರ್‌ಗಳ ಮುಖಾಂತರ ರಾಯಚೂರು ತಾಲ್ಲೂಕಿನಡಿಯ 8 ಕೆರೆಗಳಾದ ಮಾನಸ್ಲಾಪುರ, ಮರ್ಚಡ, ಯಾಗನೂರು, ಗಣಮೂರು, ಯಾಪ್ಲಲದಿನ್ನಿ, ಕೊರತಕೊಂಡ, ಡಿ.ರಾಂಪೂರ ಮತ್ತು ಅತ್ಕೂರು ಕೆರೆಗಳಿಗೆ ನೀರು ತುಂಬಿಸುವ ರೂ.34.80 ಕೋಟಿ ಅಂದಾಜು ಮೊತ್ತದ ಯೋಜನಾ ಕಾಮಗಾರಿಗಳಿಗೆ ದಿ:14.12.2016 ರಲ್ಲಿ ಜರುಗಿದ ನಿಗಮದ 108ನೇ ನಿರ್ದೇಶಕರ ಮಂಡಳಿ ಸಭೆಯಲ್ಲಿ ಅನುಮೋದನೆ ನೀಡಲಾಗಿರುತ್ತದೆ. ಪ್ರಸ್ತುತ ಶೀಘ್ರದಲ್ಲಿಯೇ ಪ್ರಸ್ತಾಪಿತ ಕೆರೆಗಳಿಗೆ ನೀರು ತುಂಬಿಸುವ ಅವಶ್ಯಕ ವಿತರಣಾ ಕಾಲುವೆ ಜಾಲದ ಕಾಮಗಾರಿಗಳನ್ನು ಟೆಂಡರ್ ಮುಖಾಂತರ ಕೈಗೆತ್ತಿಕೊಳ್ಳಲು ಯೋಜಿಸಲಾಗಿದೆ. ಪ್ರಸ್ತುತ ನಾರಾಯಣಪುರ ಬಲದಂಡೆ ಕಾಲುವೆ ಕಿ.ಮೀ.95.00 ರಿಂದ 168.00 ವರೆಗಿನ ವಿಸ್ತರಣೆಯಡಿ ಈ ಕೆಳಕಂಡ ವಿತರಣಾ ಕಾಲುವೆ ಜಾಲದ ನಿರ್ಮಾಣದ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು ಪ್ರಗತಿಯಲ್ಲಿರುತ್ತವೆ. 1) ನಾ.ಬ.ದಂ.ಕಾ ವಿತರಣಾ ಕಾಲುವೆ ಸಂ.23 ಕಿ.ಮೀ.0.00 ದಿಂದ 11.17 (ಕಿ.ಮೀ.5.80 ರಿಂದ 9.96 ವರೆಗೆ ಬೃಹತ್ ಅಕ್ವೆಡೆಕ್ಟ್ ನಿರ್ಮಾಣ ಒಳಗೊಂಡು)– 2 ಪ್ಯಾಕೇಜ್ ಕಾಮಗಾರಿಗಳು. 2) ನಾ.ಬ.ದಂ.ಕಾ ವಿತರಣಾ ಕಾಲುವೆ ಸಂ.36 –ಮನಸ್ಲಾಪುರ ಮತ್ತು ಮರ್ಚಡ್ ಸಣ್ಣ ನೀರಾವರಿ ಕೆರೆ ತುಂಬಿಸುವಿಕೆ ಪ್ಯಾಕೇಜ್ ಕಾಮಗಾರಿ 3) ನಾ.ಬ.ದಂ.ಕಾ ವಿತರಣಾ ಕಾಲುವೆ ಸಂ.38 –ಯಗನೂರು ಸಣ್ಣ ನೀರಾವರಿ ಕೆರೆ ತುಂಬಿಸುವಿಕೆ ಪ್ಯಾಕೇಜ್ ಕಾಮಗಾರಿ 4) ಟೇಲ್ ಎಂಡ್ ವಿತರಣಾ ಕಾಲುವೆ ಕಿ.ಮೀ.0.00 ದಿಂದ 18.60 ಪ್ಯಾಕೇಜ್ ಕಾಮಗಾರಿ. ಮುಂದುವರೆದು, ಟೇಲ್ ಎಂಡ್ ವಿತರಣಾ ಕಾಲುವೆಯ ಟೇಲ್ ಆಫ್ / ಫೀಡರ್ ಮತ್ತು ಉಪ ವಿತರಣಾ ಕಾಲುವೆ ಸಂ.5, 8 ಹಾಗೂ 9 ರ ಕಾಲುವೆ ಜಾಲದ ನಿರ್ಮಾಣದಿಂದ ಯಾಪಲದಿನ್ನಿ, ಗಣಮೂರ, ಕೊರ್ತಕೊಂಡ, ಡಿ.ರಾಂಪುರ ಹಾಗೂ ಅತ್‌ಕೂರ ಸಣ್ಣ ನೀರಾವರಿ ಕೆರೆಗಳನ್ನು ತುಂಬಿಸುವ ಕಾಮಗಾರಿಗಳಿಗಾಗಿ ಅಂದಾಜು ಪತ್ರಿಕೆ ಅಂತಿಮಗೊಳಿಸಲಾಗಿದ್ದು ಪ್ರಸಕ್ತ 2018–19ನೇ ಸಾಲಿನ ಕಾರ್ಯಕ್ರಮ ಪಟ್ಟಿಯಡಿ ಪರಿಗಣಿಸಿ ಕೈಗೆತ್ತಿಕೊಳ್ಳಲು ಯೋಜಿಸಲಾಗಿದೆ.

ಜಸಂಇ 32 ಎಂ.ಎಲ್.ಎ 2018

(ಡಿ.ಕೆ.ಶಿವಕುಮಾರ್)
ಜಲಸಂಪನ್ಮೂಲ ಸಚಿವರು
(ಭಾರಿ ಮತ್ತು ಮಧ್ಯಮ ನೀರಾವರಿ)